ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ
## ಮಾಸಪತ್ರಿಕೆ
# JSS VARTHAPATHRA
*Monthly Magzine*

ಸಂಪುಟ 4 ಸಂಚಿಕೆ 19 ಜುಲೈ 2019

## ಜೆಎಸ್‌ಎಸ್ ಕಾನೂನು ಕಾಲೇಜು 12ನೇ ಪದವೀಧರರ ದಿನಾಚರಣೆ




ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ನಡೆದ ಪದವೀಧರರ ದಿನಾಚರಣೆಯಲ್ಲಿ ಪ್ರೊ. ಶಿವಾನಂದ ಭಾರತಿ, ಪ್ರೊ. ಕೆ.ಎಸ್. ಸುರೇಶ್, ಕರ್ನಾಟಕ ಹೈಕೋರ್ಟಿನ ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ರವಿ ಮಳಿಮಠ್, ಕಾನೂನು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಂಕ್ರಯ್ಯ ಬಿ. ವಸ್ತ್ರಮಠ್, ಡಾ. ಸಿ.ಜಿ. ಬೆಟಸೂರಮಠ, ಡಾ. ಎಸ್. ನಟರಾಜ್ ಹಾಗೂ ಪ್ರಶಸ್ತಿ ಪುರಸ್ಕೃತ ವಿದ್ಯಾರ್ಥಿಗಳು



ನವದೆಹಲಿಯಲ್ಲಿ ಘನತೆವೆತ್ತ ರಾಷ್ಟ್ರಪತಿಗಳಾದ ಶ್ರೀ ರಾಮನಾಥ್ ಕೋವಿಂದ್ ರವರನ್ನು ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸುತ್ತಿರುವುದು. ಚಿತ್ರದಲ್ಲಿ ಕೇಂದ್ರ ಸಚಿವರಾದ ಶ್ರೀ ಡಿ.ವಿ. ಸದಾನಂದಗೌಡ ಮತ್ತು ಡಾ. ಬಿ. ಸುರೇಶ್‌ರವರು



ಸುತ್ತೂರಿಗೆ ಭೇಟಿ ನೀಡಿ 'ವಿಜ್ಞಾನ ನಗರ' (ಸೈನ್ಸ್ ಸಿಟಿ) ನಿರ್ಮಾಣ ಸ್ಥಳ ಪರಿಶೀಲಿಸಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರು ಗಳವರನ್ನು ಉಪಮುಖ್ಯ ಮಂತ್ರಿಗಳಾದ ಶ್ರೀ ಜಿ. ಪರಮೇಶ್ವರ್ ರವರು ಭೇಟಿಯಾಗಿ ಆಶೀರ್ವಾದ ಪಡೆದರು




ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನಡೆದ ನೀರು ನಿರ್ವಹಣೆ ಕುರಿತ ಕಾರ್ಯಾಗಾರದ ಉದ್ಘಾಟನೆಯಲ್ಲಿ ಪ್ರೊ. ಪಿ. ಮುಜುಂದಾರ್, ಡಾ. ಎಚ್. ಬಸವನ ಗೌಡಪ್ಪ, ಡಾ. ಬಿ. ಮಂಜುನಾಥ್, ಪ್ರೊ. ಹ್ಯಾರಿ ಡಿಕ್ಸನ್, ಪ್ರೊ. ಡೇವಿಡ್ ಹಾಕಿನ್ಸ್, ಡಾ. ಕೆ.ಎ. ರವೀಶ್ ಮತ್ತು ಡಾ. ಎಚ್.ಪಿ. ಶಿವರಾಜು

## ಹಣಕ್ಕಿಂತ ಸೇವಾಮನೋಭಾವ ಮುಖ್ಯ - ನ್ಯಾ. ಶ್ರೀ ರವಿ ಮಳಿಮಠ್

ವಕೀಲರು ಸೇವಾಮನೋಭಾವನೆಯಿಂದ ಕರ್ತವ್ಯ ನಿರ್ವಹಿಸಬೇಕೇ ಹೊರತು ಕೇವಲ ಹಣ ಮಾಡುವ ಉದ್ದೇಶದಿಂದ ವಕೀಲ ವೃತ್ತಿಗೆ ಬರಬಾರದು ಎಂದು ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ರವಿ ಮಳಿಮಠ್ ಸಲಹೆ ನೀಡಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 12ನೇ ಪದವೀಧರರ ಸಮಾರಂಭದಲ್ಲಿ ಅವರು ಮಾತನಾಡಿದರು.




12ನೇ ಪದವೀಧರರ ದಿನಾಚರಣೆಯಲ್ಲಿ ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ರವಿ ಮಳಿಮಠ್ ಮಾತನಾಡುತ್ತಿರುವುದು

ಪೋಷಕರು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಸಾಕಷ್ಟು ತ್ಯಾಗ ಮಾಡಿರುತ್ತಾರೆ. ಅದನ್ನು ಮಕ್ಕಳು ಅರ್ಥ ಮಾಡಿಕೊಂಡು ಸಮಾಜ, ಕಾಲೇಜು ಹಾಗೂ ಪೋಷಕರಿಗೆ ಕೀರ್ತಿ ತರುವಂತಹ ಕೆಲಸ ಮಾಡಬೇಕು. ಸವಾಲುಗಳನ್ನು ಎದುರಿಸಬೇಕು. ನಕಾರಾತ್ಮಕ ಮನೋಭಾವವನ್ನು ಬಿಡಬೇಕು. ಪದವಿ ಮುಗಿದ ಕೂಡಲೆ ಮುಂದೇನು? ಎಂಬ ಪ್ರಶ್ನೆ ಮೂಡಿ ಭವಿಷ್ಯದ ಬಗ್ಗೆ ಚಿಂತೆ ಶುರುವಾಗುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಮುಂದೇನು ಮಾಡಬೇಕೆಂಬ ಸ್ಪಷ್ಟ ಗುರಿಯನ್ನು ಮೊದಲೇ ನಿರ್ಧರಿಸಿಕೊಂಡು ಆ ಹಾದಿಯಲ್ಲೇ ಸಾಗಿ ಗುರಿ ಮುಟ್ಟಬೇಕು ಎಂದರು.

ಕಾನೂನು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಂಕ್ರಯ್ಯ ಬಿ. ವಸ್ತ್ರಮಠ್ ಮಾತನಾಡಿ ನೀವೆಲ್ಲಾ ವಿದ್ಯಾರ್ಥಿಜೀವನ ಮುಗಿಸಿದ ಸಂಭ್ರಮದಲ್ಲಿದ್ದೀರಿ. ಆದರೆ ಕಲಿಕೆಗೆ ಕೊನೆ ಇಲ್ಲ. ಪ್ರತಿದಿನ ಏನಾದರೂ ಕಲಿಯುವುದು ಇದ್ದೇ ಇರುತ್ತದೆ. ವಕೀಲರಿಗೆ ಕೇವಲ ಶ್ರೀಮಂತ ಕಕ್ಷಿದಾರರೆ ಸಿಗುವುದಿಲ್ಲ. ನ್ಯಾಯ ಕೇಳಿಕೊಂಡು ಬಡವರು ನಿಮ್ಮ ಬಳಿ ಬರುತ್ತಾರೆ. ಅವರ ನೋವಿಗೆ ಸ್ಪಂದಿಸಿ ಸಮಾಜಮುಖಿಯಾಗಿ ಕರ್ತವ್ಯ ನಿರ್ವಹಿಸಿ. ವಕೀಲರು ಯಾವಾಗಲೂ ಮನಸ್ಸುಗಳನ್ನು ಹಾಗೂ ಸಮಾಜವನ್ನು ಕಟ್ಟುವ ಕೆಲಸ ಮಾಡಬೇಕು. ಪ್ರಕರಣಗಳು ಇರಲಿ ಬಿಡಲಿ ಪ್ರತಿದಿನ ನ್ಯಾಯಾಲಯಕ್ಕೆ ಹೋದರೆ ಹಲವು ಮಾನವೀಯ ಮೌಲ್ಯಗಳು ನಿಮ್ಮ ಗಮನಕ್ಕೆ ಬರುತ್ತವೆ ಎಂದು ಕಿವಿ ಮಾತು ಹೇಳಿದರು.

ಎಲ್‌ಎಲ್‌ಎಂನಲ್ಲಿ ಬಿ.ಆರ್. ಮುರಳೀಧರ್ (ಪ್ರಥಮ), ಎಲ್‌ಎಲ್‌ಬಿಯಲ್ಲಿ ಶ್ರೀ ವೆಂಕಟೇಶ್ ಸೋಮರೆಡ್ಡಿ (ಪ್ರಥಮ) ಎಚ್.ಎಂ. ಬಿಪಿನ್ (ದ್ವಿತೀಯ) ಶ್ರೀ ಡಿ. ಉದಯ್‌ಕುಮಾರ್ (ತೃತೀಯ), ಬಿಎಎಲ್‌ಎಲ್‌ಬಿ ಯಲ್ಲಿ ಭಾರ್ಗವಿ (ಪ್ರಥಮ), ಬಿಬಿಎ

ಎಲ್‌ಎಲ್‌ಬಿಯಲ್ಲಿ ಶೀತಲ್ ಶೆಟ್ಟಿ (ಪ್ರಥಮ), ಫಾತಿಮಾ ಇಬ್ರಾಹಿಂ (ದ್ವಿತೀಯ) ಸೇರಿದಂತೆ 120 ವಿದ್ಯಾರ್ಥಿಗಳು ಪದವಿ ಗಳಿಸಿದ್ದಾರೆ.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಪ್ರೊ. ಕೆ.ಎಸ್. ಸುರೇಶ್, ಪ್ರೊ. ಶಿವಾನಂದ ಭಾರತಿ, ಡಾ. ಎಸ್. ನಟರಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

---

## ಸುತ್ತೂರಿನಲ್ಲಿ ದಕ್ಷಿಣ ಭಾರತದ ಮೊದಲ 'ವಿಜ್ಞಾನ ನಗರ' ನಿರ್ಮಾಣ

ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ವಿಜ್ಞಾನ ಕೇಂದ್ರ ತೆರೆಯಲಾಗುತ್ತಿದ್ದು ದಕ್ಷಿಣ ಭಾರತದಲ್ಲಿಯೇ ಮೊದಲ ವಿಜ್ಞಾನ ನಗರ ಸುತ್ತೂರಿನಲ್ಲಿ ಆರಂಭಿಸಲಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ತಿಳಿಸಿದರು.

ಸುತ್ತೂರಿಗೆ ಭೇಟಿ ನೀಡಿ ಸೈನ್ಸ್ ಸಿಟಿ ನಿರ್ಮಾಣ ಸಂಬಂಧ ಸ್ಥಳ ಪರಿಶೀಲಿಸಿದ ಬಳಿಕ ಮಾತನಾಡಿದ ಅವರು ಸುತ್ತೂರಿನಲ್ಲಿ ಸುಮಾರು 200 ಕೋಟಿ ವೆಚ್ಚದಲ್ಲಿ ಬೃಹತ್ ವಿಜ್ಞಾನ ನಗರವನ್ನು ನಿರ್ಮಿಸಲಾಗುವುದು. ಮಂಗಳೂರು, ಧಾರವಾಡದಲ್ಲಿ ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಸುತ್ತೂರಿನಲ್ಲಿ ಆಗುತ್ತಿರುವ ಸೈನ್ಸ್ ಸಿಟಿ ದಕ್ಷಿಣ ಭಾರತದಲ್ಲಿಯೇ ಮೊದಲನೆಯದು. ಇದಕ್ಕಾಗಿ ಜೆಎಸ್‌ಎಸ್ ಸಂಸ್ಥೆಯು 25 ಎಕರೆ ಭೂಮಿ ಕೊಡಲು ಮುಂದೆ ಬಂದಿದೆ. ಇದರ ಸಂಪೂರ್ಣ ಡಿಪಿಆರ್ ಸಿದ್ಧಪಡಿಸಿ ಕೇಂದ್ರಕ್ಕೆ ನೀಡಲಾಗುವುದು ಎಂದರು.

ಈ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಿದ್ದು ಅನುಮತಿ ದೊರೆಯುತ್ತಿದ್ದಂತೆ ಕೆಲಸ ಆರಂಭಿಸಲಾಗುವುದು. ಈ ಯೋಜನೆಯನ್ನು 5 ವರ್ಷದಲ್ಲಿ ಮುಗಿಸಬೇಕು ಎಂದು ಸಮಯ ನಿಗದಿಯಾಗಿದೆ. ಆದರೆ ಕೇವಲ ಎರಡು ವರ್ಷದಲ್ಲಿಯೇ ಕೆಲಸ ಮುಗಿಸಲಾಗುವುದು. ಶಾಲಾಮಕ್ಕಳಿಗೆ ಬಾಲ್ಯದಿಂದಲೇ ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಮಾಹಿತಿ ನೀಡುವುದಕ್ಕಾಗಿ ಇಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ಮಾದರಿಗಳನ್ನು ಇಡಲಾಗುವುದು. ಅಂತೆಯೇ ಉಪನ್ಯಾಸ ಕಾರ್ಯಕ್ರಮಗಳು ನಡೆಯಲಿವೆ ಎಂದು ಹೇಳಿದರು.



ಸುತ್ತೂರಿಗೆ ಭೇಟಿ ನೀಡಿದ ಉಪಮುಖ್ಯಮಂತ್ರಿಗಳಾದ ಡಾ. ಜಿ. ಪರಮೇಶ್ವರ್‌ರವರು ಸೈನ್ಸ್ ಸಿಟಿ ನಿರ್ಮಾಣ ಸಂಬಂಧ ಸ್ಥಳ ಪರಿಶೀಲಿಸಿದರು

ಮೂಲ ವಿಜ್ಞಾನವನ್ನು ಉತ್ತೇಜಿಸಲು ಇದನ್ನು ನಿರ್ಮಿಸಲಾಗುತ್ತದೆ. ಇಲ್ಲಿ ಮೂಲ ವಿಜ್ಞಾನ ಕುರಿತಾದ ಮಾಹಿತಿ, ವೈಜ್ಞಾನಿಕ ಗ್ಯಾಲರಿ, ಪ್ಲಾನಿಟೇರಿಯಂ, ಸ್ಪೇಸ್ ಥಿಯೇಟರ್ಸ್, 3 ಡೈಮೆನ್ಷನ್ ಡೆಮಾನ್‌ಸ್ಟ್ರೇಷನ್, ಆಸ್ಟ್ರೋ ಟೆಕ್ನಾಲಜಿ, ಸೈನ್ಸ್ ಮಾಡೆಲ್ಸ್, ಸೈನ್ಸ್ ಆನ್ ಎ ಸ್ಪೇರ್, ಹೌಸ್ ಮ್ಯೂಸಿಯಂ, ಸೈನ್ಸ್ ಪಾರ್ಕ್ ಮತ್ತು ಎಗ್ಸಿಬಿಷನ್ ಗ್ಯಾಲರಿ, ಮಾಡರ್ನ್ ಅಡ್ವಾನ್ಸ್‌ಮೆಂಟ್ ಇನ್ ಅಸ್ಟ್ರೋನೊಮಿ, ಬಯಾಲಜಿ ಮತ್ತು ಇತರ ವೈಜ್ಞಾನಿಕ ಪ್ರದರ್ಶನಗಳು ಇರುತ್ತವೆ. ಎಲ್ಲಾ ವಯೋಮಾನದವರಿಗೆ ವೈಜ್ಞಾನಿಕ ಮಾಹಿತಿ ನೀಡುವ ಕೇಂದ್ರವಾಗಿ ಸೈನ್ಸ್ ಸಿಟಿ ರೂಪುಗೊಳ್ಳುತ್ತಿದೆ.

ಈ ಸಂಬಂಧ ನಡೆದ ಸಭೆಯಲ್ಲಿ ಪರಮಪೂಜ್ಯ ಜಗದ್ಗುರುಗಳು, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಪ್ರೊ. ಎಸ್.ಪಿ. ಮಂಜುನಾಥ್, ಶಾಸಕರಾದ ಶ್ರೀ ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಸದಸ್ಯರಾದ ಶ್ರೀ ಆರ್. ಧರ್ಮಸೇನ, ಜಿಲ್ಲಾಧಿಕಾರಿ ಗಳಾದ ಶ್ರೀ ಅಭಿರಾಮ್ ಜಿ. ಶಂಕರ್, ನಗರ ಪೊಲೀಸ್ ಆಯುಕ್ತರಾದ ಶ್ರೀ ಕೆ.ಟಿ. ಬಾಲಕೃಷ್ಣ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ರಿಷ್ಯಂತ್ ಕುಮಾರ್, ಎಂಡಿಎ ಆಯುಕ್ತರಾದ ಶ್ರೀ ಪಿ.ಎಸ್. ಕಾಂತರಾಜು, ಮೈಲ್ಯಾಕ್ ಮಾಜಿ ಅಧ್ಯಕ್ಷರಾದ ಶ್ರೀ ಎಚ್.ಎ. ವೆಂಕಟೇಶ್ ಮೊದಲಾದವರು ಇದ್ದರು.

---

## ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವಿಶ್ವ ರಕ್ತದಾನ ದಿನಾಚರಣೆ

ಮೈಸೂರು ನಗರದ ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಪೆಥಾಲಜಿ ವಿಭಾಗ, ರಕ್ತನಿಧಿ ವಿಭಾಗ, ನರ್ಸಿಂಗ್ ಶಾಲಾ ಕಾಲೇಜು ಮತ್ತು ಯಂಗ್ ಇಂಡಿಯನ್ಸ್ ಸಿಐಐ ಸಹಯೋಗದಲ್ಲಿ ವಿಶ್ವ ರಕ್ತದಾನ ದಿನಾಚರಣೆಯನ್ನು ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಚ್. ಬಸವನಗೌಡಪ್ಪರವರು ಯಾವುದೇ ಹಾನಿಯಾಗದಂತೆ ಆಗಾಗ್ಗೆ ದಾನ ಮಾಡಬಹುದಾದ ಏಕೈಕ ವಸ್ತುವೆಂದರೆ ರಕ್ತ ಮಾತ್ರ ಎಂದರು. ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಶೈಕ್ಷಣಿಕ ನಿರ್ದೇಶಕರಾದ ಡಾ. ಪಿ.ಎ. ಕುಶಾಲಪ್ಪರವರು ಮಾತನಾಡಿ ಸುರಕ್ಷಿತ ರಕ್ತದ ಲಭ್ಯತೆ ಸುಧಾರಿಸಲು ದಾನಿಗಳು ಸ್ವಯಂಪ್ರೇರಿತರಾಗಿರಬೇಕು ಹಾಗೂ ನಿಯಮಿತವಾಗಿ ರಕ್ತದಾನಿಗಳಾಗಬೇಕು ಎಂದು ಸಲಹೆ ನೀಡಿದರು. ಜೆಎಸ್‌ಎಸ್ ಪ್ರಾಜೆಕ್ಟ್ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಹರಿ ದ್ವಾರಕನಾಥ್‌ರವರು ರಕ್ತ ಮತ್ತು ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸುವುದು ಒಂದು ಮಹತ್ವದ ಕೆಲಸ. ಜೊತೆಗೆ ಈ ದಾನವು ಒಂದು ಉದಾತ್ತಕ್ರಿಯೆ ಎಂದು ತಿಳಿಸಿದರು. ಇದೇ ವೇಳೆ ಥಲಸ್ಸೆಮಿಯಾ ರೋಗಿಗಳ ಪಾಲಕರು ನಿಯಮಿತವಾಗಿ ರಕ್ತದಾನ ಮಾಡಿ ಜೀವ ಉಳಿಸಿದ ದಾನಿಗಳಿಗೆ ಕೃತಜ್ಞತೆ ಸಲ್ಲಿಸಿದರು.

ಯಂಗ್ ಇಂಡಿಯನ್ಸ್ ಸಿಐಐ ಅಧ್ಯಕ್ಷರಾದ ಶ್ರೀ ಘನಶ್ಯಾಮ್ ಮುರಳಿ, ಜೆಎಸ್‌ಎಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ. ಎಂ. ಗುರುಸ್ವಾಮಿ, ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಉಪ ಪ್ರಾಂಶುಪಾಲರಾದ ಡಾ. ಜಿ.ವಿ. ಮಂಜುನಾಥ್, ಜೆಎಸ್‌ಎಸ್ ನರ್ಸಿಂಗ್ ಕಾಲೇಜು ಪ್ರಾಂಶುಪಾಲರಾದ ಪ್ರೊ. ಶೀಲಾ ವಿಲಿಯಮ್ಸ್, ಜೆಎಸ್‌ಎಸ್ ನರ್ಸಿಂಗ್ ಶಾಲೆಯ ಪ್ರಾಂಶುಪಾಲರಾದ ಶ್ರೀ ಪಿ. ಶಶಿಧರ್, ಪೆಥಾಲಜಿ ಮುಖ್ಯಸ್ಥರಾದ ಡಾ. ಕೆ. ಜಯಶ್ರೀ, ರಕ್ತನಿಧಿ ಅಧಿಕಾರಿ ಗಳಾದ ಡಾ. ಪಿ. ಪಲ್ಲವಿ ಡಾ. ನಮ್ರತಾ ಉಪಸ್ಥಿತರಿದ್ದರು.

# 'ಶ್ರದ್ಧಾ ಸುಮನ್ ಶ್ರದ್ಧಾಂಜಲಿ ಕಳಶ್' ಯಾತ್ರೆಗೆ ಸುತ್ತೂರು ಮಠದಲ್ಲಿ ಸ್ವಾಗತ

ಕಾರ್ಗಿಲ್ ವಿಜಯದ ದ್ವಿದಶಮಾನೋತ್ಸವ ಅಂಗವಾಗಿ ಸಿಟಿಜನ್ಸ್ ಸೊಸೈಟಿ ಆಫ್ ಇಂಡಿಯಾ ಸಂಸ್ಥೆ ವತಿಯಿಂದ ಹಮ್ಮಿಕೊಂಡಿರುವ 'ಶ್ರದ್ಧಾ ಸುಮನ್ ಶ್ರದ್ಧಾಂಜಲಿ ಕಳಶ್' ಯಾತ್ರೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠಕ್ಕೆ ಆಗಮಿಸಿತು. ಈ ಸಂದರ್ಭದಲ್ಲಿ ಮಾತನಾಡಿದ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಕಾರ್ಗಿಲ್ ಯುದ್ಧದ ಜಯವು ಭಾರತೀಯರ ಅಭಿಮಾನದ ಸಂಕೇತ ಎಂದರು.

ಯುದ್ಧದಲ್ಲಿ ಹೋರಾಡಿದ ಹಾಗೂ ಮಡಿದ ವೀರಯೋಧರನ್ನು ನಾವು ಸ್ಮರಿಸಬೇಕು. ನಮ್ಮ ಯೋಧರು ತಮ್ಮ ಪ್ರಾಣದ ಹಂಗನ್ನು ತೊರೆದು ದೇಶದ ರಕ್ಷಣೆ ಮಾಡುತ್ತಿದ್ದಾರೆ. ಇಂತಹ ಯಾತ್ರೆಗಳ ಮೂಲಕ ಯುವ ಜನತೆಯಲ್ಲಿ ರಾಷ್ಟ್ರಪ್ರೇಮ ಬೆಳೆಸಲು ಸಾಧ್ಯ ಎಂದರು.

ಸಿಟಿಜನ್ಸ್ ಸೊಸೈಟಿ ಆಫ್ ಇಂಡಿಯಾದ ಬೆಂಗಳೂರು ವಿಭಾಗದ ಕಾರ್ಯದರ್ಶಿಗಳಾದ ಶ್ರೀ ಎಸ್.ಸಿ. ಭಂಡಾರಿಯವರು ಕಾರ್ಗಿಲ್ ವಿಜಯದ ಅಂಗವಾಗಿ ನಮ್ಮ ಸಂಘಟನೆ ವತಿಯಿಂದ 1999ರಿಂದಲೂ ಪ್ರತಿ ವರ್ಷ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದೇವೆ. ಕಾರ್ಗಿಲ್ ವಿಜಯಕ್ಕೆ 20 ವರ್ಷ ತುಂಬುತ್ತಿರುವ ಈ ಸಂದರ್ಭದಲ್ಲಿ 'ಶ್ರದ್ಧಾ ಸುಮನ್ ಶ್ರದ್ಧಾಂಜಲಿ ಕಳಶ್' ಯಾತ್ರೆ ಏರ್ಪಡಿಸಿದ್ದು, ಈ ಯಾತ್ರೆ ಇಡೀ ದೇಶಾದ್ಯಂತ ಸಂಚರಿಸಲಿದೆ ಎಂದರು. ಮಠದ ಸಿಬ್ಬಂದಿ, ಕಾಲೇಜಿನ ಪ್ರಾಂಶುಪಾಲರು, ಅಧ್ಯಾಪಕರು, ಎನ್‌ಸಿಸಿ ಕೆಡೆಟ್ಸ್, ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.




'ಶ್ರದ್ಧಾ ಸುಮನ್ ಶ್ರದ್ಧಾಂಜಲಿ ಕಳಶ್' ಯಾತ್ರೆಯು ಮೈಸೂರಿನ ಸುತ್ತೂರು ಶ್ರೀಮಠಕ್ಕೆ ಆಗಮಿಸಿದ ಸಂದರ್ಭ

## ಜೆಎಸ್‌ಎಸ್ ಮೆಡಿಕಲ್ ಕಾಲೇಜಿನಲ್ಲಿ ನೀರು ನಿರ್ವಹಣೆ ಕುರಿತ ಕಾರ್ಯಾಗಾರ

ಮೈಸೂರಿನ ಶಿವರಾತ್ರೀಶ್ವರ ನಗರದಲ್ಲಿರುವ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನೀರು ನಿರ್ವಹಣೆ ಕುರಿತಾದ 4 ದಿನಗಳ ಇಂಡೋ-ಯುಕೆ ಕಾರ್ಯಾಗಾರ ನಡೆಯಿತು.

ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್, ಇಂಡಿಯಾ ಯುಕೆ ವಾಟರ್ ಸೆಂಟರ್ ಹಾಗೂ ಪ್ಲೈಮೌತ್ ವಿಶ್ವವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ 'ಸೇಫ್ ಅಂಡ್ ಸಸ್ಟೈನಬಲ್ ಟೆಕ್ನಾಲಜೀಸ್ ಅಂಡ್ ಸ್ಟ್ರಾಟರ್ಜೀಸ್ ಫಾರ್ ಇಂಟಿಗ್ರೇಟೆಡ್ ಫ್ರೆಶ್ ವಾಟರ್ ರಿಸೋರ್ಸ್ ಮ್ಯಾನೇಜ್‌ಮೆಂಟ್' ವಿಷಯ ಕುರಿತ ಕಾರ್ಯಾಗಾರವನ್ನು ಜೆಎಸ್‌ಎಸ್ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಚ್. ಬಸವನಗೌಡಪ್ಪ ಹಾಗೂ ಬೆಂಗಳೂರಿನ ಶ್ರೀ ಪಿ.ಪಿ. ಮುಜುಂದಾರ್ ಉದ್ಘಾಟಿಸಿದರು.

ಪ್ರೊ. ಪಿ. ಮುಜುಂದಾರ್‌ರವರು ಮಾತನಾಡಿ ಭಾರತ ಸೇರಿದಂತೆ ವಿಶ್ವದ ಅನೇಕ ರಾಷ್ಟ್ರಗಳು ನೀರಿನ ಕೊರತೆ ಎದುರಿಸುತ್ತಿವೆ. ಮಾಲಿನ್ಯವು ಮಾನವನ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಒಳಚರಂಡಿ, ಕೈಗಾರಿಕಾ ತ್ಯಾಜ್ಯಗಳಿಂದ ಪರಿಸರ ಕಲುಷಿತಗೊಂಡು ಹಲವು ಸಮಸ್ಯೆಗಳನ್ನು ತಂದೊಡ್ಡುತ್ತಿದೆ ಎಂದರು.

ನೀರಿನ ಸಂರಕ್ಷಣೆ, ಸುಸ್ಥಿರ ನಿರ್ವಹಣೆ ಅತ್ಯಗತ್ಯವಾಗಿದ್ದು, ಜಲಸಂರಕ್ಷಣೆ, ನೀರಿನ ಮಾನದಂಡಗಳು, ನಿಯಂತ್ರಣ ಮತ್ತು ಮಾಲಿನ್ಯ ತಗ್ಗಿಸುವ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು. ಅಂತರ್ಜಲ ಹೆಚ್ಚಿಸುವುದು, ನೈಸರ್ಗಿಕ ಸಂಪತ್ತು ಕಾಪಾಡುವುದೂ ಸೇರಿದಂತೆ ಹಲವು ಮುಂಜಾಗ್ರತಾ ಕ್ರಮಗಳಿಂದ ನೀರಿನ ಸಮರ್ಪಕ ನಿರ್ವಹಣೆಗೆ ಹೊಸ ತಂತ್ರಜ್ಞಾನ ಬಳಕೆ ಮಾಡುವ ಬಗ್ಗೆ ಪ್ರೊ. ಪಿ. ಮುಜುಂದಾರ್ ತಿಳಿಸಿದರು.

ಭಾರತದ ಪರವಾಗಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ನೀರು ಮತ್ತು ಆರೋಗ್ಯ ವಿಭಾಗದ ಮುಖ್ಯಸ್ಥರಾದ ಡಾ. ಎಚ್.ಪಿ. ಶಿವರಾಜು ಹಾಗೂ ಯುಕೆ ಪರವಾಗಿ ಪ್ಲೈಮೌತ್ ವಿಶ್ವವಿದ್ಯಾಲಯದ ಡಾ. ಡೇವಿಡ್ ಜೆಂಕಿನ್‌ರವರು ಕಾರ್ಯಾಗಾರದ ಮುಖ್ಯಸ್ಥರಾಗಿ ಭಾಗವಹಿಸಿದ್ದರು.

ಯುಕೆಯಿಂದ ಐಯುಕೆ ಡಬ್ಲ್ಯುಸಿ ಕೋ-ಆರ್ಡಿನೇಟರ್‌ರಾದ ಪ್ರೊ. ಹ್ಯಾರಿ ಡಿಕ್ಸನ್, ಜೆಎಸ್‌ಎಸ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್‌ರಾದ ಡಾ. ಬಿ. ಮಂಜುನಾಥ್ ಹಾಗೂ ಇತರರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

### ಸಮಕುಲಪತಿಗಳಾಗಿ ಅಧಿಕಾರ ಸ್ವೀಕಾರ

ಮೈಸೂರಿನ ಜೆಎಸ್‌ಎಸ್ ಅಕ್ಯಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್ ಸಂಸ್ಥೆಯಲ್ಲಿ ಇದುವರೆಗೂ ಕುಲಪತಿಗಳಾಗಿ ಸೇವೆ ಸಲ್ಲಿಸುತ್ತಿದ್ದ ಡಾ. ಬಿ. ಸುರೇಶ್ ಅವರನ್ನು ಇದೇ ಸಂಸ್ಥೆಯ ಸಮಕುಲಪತಿಗಳಾಗಿ ನೇಮಕ ಮಾಡಲಾಗಿದೆ. ಅವರು ಸದರಿ ಅಧಿಕಾರವನ್ನು ದಿನಾಂಕ 13.6.2019 ರಂದು ವಹಿಸಿಕೊಂಡಿದ್ದಾರೆ. ಪ್ರಾಂಶುಪಾಲರಾಗಿದ್ದ ಡಾ. ಎಚ್. ಬಸವನಗೌಡಪ್ಪ ಅವರು ಕುಲಪತಿಗಳಾಗಿ ಅಧಿಕಾರ ಸ್ವೀಕರಿಸಿದ್ದಾರೆ.

**ಜೆಎಸ್‌ಎಸ್ ಸಂಸ್ಥೆಗಳಲ್ಲಿ**
**ನಡೆಯುವ ಕಾರ್ಯಕ್ರಮದ ವರದಿಗಳು**
**ಮತ್ತು ಛಾಯಾಚಿತ್ರಗಳನ್ನು**
**ಜೆಎಸ್‌ಎಸ್ ಮಾಸಪತ್ರಿಕೆಯ**
**ಈ ಇಮೇಲ್ ವಿಳಾಸಕ್ಕೆ ಕಳುಹಿಸುವುದು :**
**email:jssmasapatrike@gmail.com**

# ವಿಶ್ವಪರಿಸರ ದಿನ

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** ವಿಶ್ವಪರಿಸರ ದಿನವನ್ನು ಆಚರಿಸಲಾಯಿತು. ಛಾಯಾಗ್ರಾಹಕ ಶ್ರೀ ಆರ್.ಕೆ. ಮಧು ರವರು ಗಿಡ ನೆಡುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ನಮ್ಮ ಪರಿಸರದ ಸಮತೋಲನ ಕಾಯ್ದುಕೊಳ್ಳಬೇಕಾದರೆ ವಿವಿಧ ಬಗೆಯ ಗಿಡ ಮರಗಳನ್ನು ಬೆಳೆಸಬೇಕು. ಪ್ರಾಣಿ ಪಕ್ಷಿಗಳು ನಿರ್ಭಯವಾಗಿ ವಾಸಿಸುವಂತಹ ವಾತಾವರಣ ನಿರ್ಮಾಣವಾಗಬೇಕು. ನಾಗರಿಕತೆಯ ಹೆಸರಿನಲ್ಲಿ ಮರಗಳನ್ನು ಕಡಿದು ಕಾಡನ್ನು ನಾಶಮಾಡಿ, ನಾಡನ್ನು ಬೆಳೆಸುತ್ತಿರುವುದು ನಿಲ್ಲಬೇಕು ಎಂದರು. ಇದೇ ವೇಳೆ ಶಾಲೆಯ ಮುಖ್ಯೋಪಾಧ್ಯಾಯ ರಾದ ಶ್ರೀ ಷಣ್ಮುಖರವರು ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಕುರಿತು ಪ್ರಮಾಣವಚನವನ್ನು ಬೋಧಿಸಿದರು. ನಂತರ ನಡೆದ ಪರಿಸರ ಜಾಥಾವು ಸರಸ್ವತಿಪುರಂ ಬಡಾವಣೆಯ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿತು. 'ಹಸಿರೇ ನಮ್ಮ ಉಸಿರು' 'ಪ್ಲಾಸ್ಟಿಕ್ ತ್ಯಜಿಸಿ ಪರಿಸರ ಉಳಿಸಿ' 'ಮನೆಗೊಂದು ಮರ ಊರಿಗೊಂದು ವನ' ಮುಂತಾದ ಘೋಷಣೆಗಳನ್ನು ಜಾಥಾದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಹೇಳುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು. ಕು. ತನುಶ್ರೀ ಮತ್ತು ತಂಡ ದವರು ಪ್ರಾರ್ಥಿಸಿದರು. ಶ್ರೀ ಸಿ.ಬಿ. ಉಮೇಶ್‌ರವರು ಸ್ವಾಗತಿಸಿದರು. ಕು. ಕೌಶಲ್ಯ ವಂದಿಸಿದರು. ಕು. ಎಂ. ಸೋನುಶ್ರೀ ಕಾರ್ಯಕ್ರಮ ನಿರೂಪಿಸಿದರು.




ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಪರಿಸರ ದಿನಾಚರಣೆ

**ಮೈಸೂರಿನ ಸಿದ್ಧಾರ್ಥನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯ** ವತಿಯಿಂದ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು. ನಗರ ಪಾಲಿಕೆ ಸದಸ್ಯರಾದ ರೂಪಾ ರವರು ಮಾತನಾಡಿ ಪರಿಸರ ನಮ್ಮೆಲ್ಲರ ಉಸಿರು. ಅದನ್ನು ಉಳಿಸಿ, ಬೆಳೆಸುವುದು ಹಾಗೂ ಪರಿಸರ ಮಾಲಿನ್ಯ ತಡೆಗಟ್ಟುವುದು ನಮ್ಮೆಲ್ಲರ ಕರ್ತವ್ಯ. ಆ ದಿಕ್ಕಿನಲ್ಲಿ ನಾವು ನೀವೆಲ್ಲರೂ ಪ್ರಯತ್ನಶೀಲರಾಗೋಣ ಎಂಬ ಕಿವಿಮಾತನ್ನು ಹೇಳಿದರು. ಬಳಿಕ ಶಾಲೆಯ ಆವರಣದ ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಿದರು. ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಬಿ. ಲತಾ ಸೇರಿದಂತೆ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.



ಮೈಸೂರಿನ ಸಿದ್ಧಾರ್ಥನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಪರಿಸರ ದಿನಾಚರಣೆ

**ಮೈಸೂರಿನ ನಾಚನಹಳ್ಳಿಪಾಳ್ಯದಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** ವಿಶ್ವ ಪರಿಸರ ದಿನ ಆಚರಿಸಲಾಯಿತು. ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳಾದ ಶ್ರೀ ಅರುಣ್ ಬಳಮಟ್ಟಿಯವರು ಮನುಷ್ಯನು ಪರಿಸರದ ಭಾಗವೇ ಆಗಿದ್ದಾನೆ. ಪರಿಸರದಿಂದ ನಾವು ಪಡೆಯುವ ಅನುಕೂಲತೆ ಹಾಗೂ ಸಂತೋಷ ಅಪರಿಮಿತ ಎಂದು ಹೇಳಿದರಲ್ಲದೆ, ಮಕ್ಕಳಿಗೆ ಕೃಷಿಯ ಬಗ್ಗೆ ಆಸಕ್ತಿ ಹಾಗೂ ಕೌಶಲ್ಯ ಬೆಳೆಸಿಕೊಳ್ಳುವ ಬಗ್ಗೆ ಕಿವಿಮಾತು ಹೇಳಿದರು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಸ್.ಎ. ಸುರೇಶ್‌ಬಾಬು ಪರಿಸರ ಸಂರಕ್ಷಣೆಯ ಅಗತ್ಯತೆ ಹಾಗೂ ಅನಿವಾರ್ಯತೆ ಕುರಿತು ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟರು. ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಚ್.ಎಂ. ಮಹದೇವಪ್ಪ ಉಪಸ್ಥಿತರಿದ್ದರು.

**ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾಲಯದ ಶ್ರೀ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜು** ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಹಾಗೂ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 104ನೇ ಜಯಂತಿ ಮಹೋತ್ಸವದ ಪ್ರಯುಕ್ತ 104 ಗಿಡಗಳನ್ನು ನೆಡಲಾಯಿತು.

ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಕೆ.ಎಸ್. ಲೋಕೇಶ್ ನಮ್ಮ ಸುತ್ತಮುತ್ತಲಿನ ಪರಿಸರವು ಗಿಡ, ಮರ, ಪ್ರಾಣಿ, ಪಕ್ಷಿ ಹೀಗೆ ಎಲ್ಲವನ್ನೂ ಒಳಗೊಂಡಿದೆ. ಇದರೊಂದಿಗೆ ಮಾನವನು ಅನ್ಯೋನ್ಯತೆಯಿಂದ ಜೀವಿಸಬೇಕು. ಆದರೆ, ಸ್ವಾರ್ಥ ಬುದ್ಧಿಯಿಂದ ವಾಯು, ಜಲ, ಶಬ್ದ ಮಾಲಿನ್ಯ ಮಾಡುವ ಮೂಲಕ ತಾನೇ ಸಮಸ್ಯೆಗಳಿಗೆ ತುತ್ತಾಗುತ್ತಿದ್ದಾನೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಭಾರ ಪ್ರಾಂಶುಪಾಲರಾದ ಡಾ. ಎಂ.ಎಸ್. ಪ್ರಭುಸ್ವಾಮಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ತೋಟಗಾರಿಕಾ ವಿಭಾಗದ ನಿರ್ದೇಶಕರಾದ ಶ್ರೀ ಶಿವಶಂಕರಪ್ಪ, ಮುಖ್ಯ ಆಡಳಿತಾಧಿಕಾರಿಗಳಾದ ಪ್ರೊ. ಜಿ.ಕೆ. ಚಂದ್ರಶೇಖರಪ್ಪ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಕೊಳ್ಳೇಗಾಲ

ಪರಿಸರ ಕಲುಷಿತವಾಗುತ್ತಿರುವುದು ಕೇವಲ ಮನುಕುಲಕಷ್ಟೇ ಅಲ್ಲದೆ ಜಗತ್ತಿನ ಇಡೀ ಜೀವಸಂಕುಲಕ್ಕೆ ಮಾರಕವಾಗುತ್ತಿರುವುದರಿಂದ ಪರಿಸರವನ್ನು ಸಂರಕ್ಷಣೆ ಮಾಡುವ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಎಲ್ಲರೂ ಮುಂದಾಗಬೇಕು ಎಂದು ವಲಯ ಅರಣ್ಯಾಧಿ ಕಾರಿಗಳಾದ ಶ್ರೀ ಮಹದೇವಸ್ವಾಮಿ ಹೇಳಿದರು.

ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜು, ಜೆಎಸ್‌ಎಸ್ ನರ್ಸಿಂಗ್ ಕಾಲೇಜು ಮತ್ತು ರೋಟರಿ ಮಿಡ್ ಟೌನ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮನುಷ್ಯನ ದುರಾಸೆ, ಏರುತ್ತಿರುವ ಜನಸಂಖ್ಯೆ, ಆಧುನೀಕರಣ, ನಗರೀಕರಣ, ವೈಭವೋಪೇತ ಜೀವನದ ಬಯಕೆಗಳು ಪರಿಸರವನ್ನು ಹಾಳು ಮಾಡುತ್ತಿವೆ. ನಮ್ಮ ಸುತ್ತಮುತ್ತಲಿನ ಗಾಳಿ, ನೀರು, ಭೂಮಿ ಎಲ್ಲವೂ ಇಂದು ಕಲುಷಿತಗೊಳ್ಳುತ್ತಿದ್ದು ಈ ದಿಶೆಯಲ್ಲಿ ನಾವೆಲ್ಲರೂ ಯೋಚಿಸುವುದಷ್ಟೇ ಅಲ್ಲದೆ ಪರಿಸರದ ಸಂರಕ್ಷಣೆಗೆ ಕಂಕಣಬದ್ಧರಾಗಬೇಕಿದೆ. ಇಲ್ಲದಿದ್ದಲ್ಲಿ ಮುಂದಿನ ತಲೆಮಾರಿಗೆ ಅಪಾಯ ಕಟ್ಟಿಟ್ಟಬುತ್ತಿ. ವಿದ್ಯಾರ್ಥಿಗಳು ಪರಿಸರ ಉಳಿಸುವ ಕಾರ್ಯ ಮಾಡಲು ಮುಂದಾಗಬೇಕು ಎಂದರು.

ನರ್ಸಿಂಗ್ ಶಾಲೆ ಪ್ರಾಂಶುಪಾಲರಾದ ಶ್ರೀ ವಿಷಕಂಠ ಮೂರ್ತಿ ಮಾತನಾಡಿ ವಾಯುಮಾಲೀನ್ಯ, ಜಲಮಾಲಿನ್ಯ, ಭೂಮಾಲೀನ್ಯ ಹಾಗೂ ಶಬ್ದಮಾಲೀನ್ಯದಿಂದ ಗಾಳಿ, ನೀರು, ಮಣ್ಣು ಸೇರಿದಂತೆ ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಮನುಕುಲದ ಆರೋಗ್ಯ ದುಸ್ಥಿತಿ ತಲುಪುತ್ತಿದೆ. ಪರಿಸರನಾಶಕ್ಕೆ ಬಹು ಮುಖ್ಯ ಕಾರಣ ಪ್ಲಾಸ್ಟಿಕ್ ಬಳಕೆ ಮೊದಲಿಗೆ ನಾವು ಇದನ್ನು ನಿಷೇಧಿಸಬೇಕಿದೆ. ಅವಶ್ಯಕತೆಯಿದ್ದಾಗ ಮಾತ್ರ ವಾಹನ ಬಳಸುವುದು, ಸುತ್ತಮುತ್ತಲಿನ ಗಿಡಗಳನ್ನು ಸಂರಕ್ಷಿಸಿ ಬೆಳೆಸುವುದು, ನೀರನ್ನು ಹಿತಮಿತವಾಗಿ ಬಳಸುವುದು, ಸಾಧ್ಯವಾದಷ್ಟು ವಸ್ತುಗಳನ್ನು ಮರುಬಳಕೆ ಮಾಡಿ ನಾವೆಲ್ಲರೂ ಪರಿಸರ ಸಂರಕ್ಷಿಸಬೇಕು ಎಂದು ತಿಳಿಸಿದರು.

ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಉಮೇಶ ಅಧ್ಯಕ್ಷತೆ ವಹಿಸಿದ್ದರು. ರೋಟರಿ ಮಿಡ್ ಟೌನ್ ಅಧ್ಯಕ್ಷರಾದ ಶ್ರೀ ಗಿರೀಶ್ ಜಡೆ, ರಾಸೇಯೋ ಕಾರ್ಯಕ್ರಮಾಧಿಕಾರಿಗಳಾದ ಪ್ರೊ. ಬಸವರಾಜು, ಪರಿಸರ ಸಂರಕ್ಷಕರಾದ ಶ್ರೀ ಮಹೇಶ್ ಪಟೇಲ್, ಶ್ರೀಮತಿ ಸ್ಮಿತಾ ಮತ್ತಿತರರು ಹಾಜರಿದ್ದರು.

## ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು

ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ ಹಾಗೂ ಹುಣಸೂರಿನ ಶಿವಯೋಗ ದೇಶಿ ಗೋಶಾಲೆ ಇವರ ಸಂಯುಕ್ತಾಶ್ರಯದಲ್ಲಿ ಹುಣಸೂರು ತಾಲ್ಲೂಕಿನ ಚೌಡಿಕಟ್ಟೆ ಗ್ರಾಮದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ಸುಮಾರು 150 ವಿದ್ಯಾರ್ಥಿಗಳು 1000 ಬೀಜದುಂಡೆಗಳನ್ನು ಕೆರೆಯ ಏರಿಯ ಮೇಲೆ ಬಿತ್ತುವುದರೊಂದಿಗೆ ವಿಶ್ವ ಪರಿಸರ ದಿನಾಚರಣೆ ಆಚರಿಸಿದರು.

ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಅರುಣ್ ಬಳಮಟ್ಟಿಯವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ವಿಶ್ವ ಪರಿಸರ ದಿನಾಚರಣೆಯನ್ನು 1974ರಿಂದ ಪ್ರತಿವರ್ಷ ಜೂನ್ 5 ರಂದು ವಿಶ್ವದೆಲ್ಲೆಡೆ ಆಚರಿಸಲಾಗುತ್ತಿದೆ. ಪ್ರತಿವರ್ಷ ಸುಮಾರು 5000 ಜನ ಶುದ್ಧ ಕುಡಿಯುವ ನೀರಿಲ್ಲದೆ ಸಾವನ್ನಪ್ಪುತ್ತಿದ್ದಾರೆ. ಭೂಮಿಯ ಮೇಲೆ 2026ರವರೆಗೆ ಬೆನ್ನುಮೂಳೆ ಹೊಂದಿರುವ ವನ್ಯಮೃಗಗಳು ಸಂಪೂರ್ಣವಾಗಿ ನಶಿಸಿಹೋಗುವ ಸಾಧ್ಯತೆ ಇದೆ ಎಂದು

ಅಂದಾಜಿಸಲಾಗಿದೆ; ಈಗಾಗಲೇ ಶೇ. 40ರಷ್ಟು ಪ್ರಾಣಿಗಳು ಶೇ. 40ರಷ್ಟು ಪಕ್ಷಿಗಳು ಹಾಗೂ ಶೇ. 75ರಷ್ಟು ಕೀಟಸಂಕುಲಗಳು ಅಳಿವಿನ ಅಂಚಿನಲ್ಲಿವೆ. ಆದುದರಿಂದ ಹೆಚ್ಚು ಗಿಡಮರಗಳನ್ನು ಬೆಳೆಸಿ ಕಾಡು ಉಳಿಸಿ, ಮನುಷ್ಯಸಂಕುಲವನ್ನಲ್ಲದೆ ಪ್ರಾಣಿ-ಪಕ್ಷಿ-ಕೀಟ ಸಂಕುಲವನ್ನು ಸಹ ಉಳಿಸುವ ಗಂಭೀರ ಪ್ರಯತ್ನವನ್ನು ನಾಗರಿಕರು ಮಾಡಬೇಕಾಗಿದೆ ಎಂದು ತಿಳಿಸಿದರು.

ಶಿವಯೋಗ ದೇಶಿ ಗೋಶಾಲೆಯ ಸಾವಯುವ ಕೃಷಿಕರಾದ ಶ್ರೀ ತಮ್ಮಯ್ಯನವರು ಮಾತನಾಡಿ ಇತ್ತೀಚಿನ ದಿನಗಳಲ್ಲಿ ರೈತರು ಹೆಚ್ಚು ಇಳುವರಿ ಪಡೆಯುವ ಸಲುವಾಗಿ ರಾಸಾಯನಿಕ ಗೊಬ್ಬರ ಹಾಗೂ ಔಷಧಿಗಳನ್ನು ಉಪಯೋಗಿಸುತ್ತಿದ್ದಾರೆ. ಇದರಿಂದ ಪ್ರಕೃತಿಯ ಮೇಲೆ ಅಡ್ಡ ಪರಿಣಾಮ ಉಂಟಾಗಿ ಜಲಚರ ಹಾಗೂ ಜೀವರಾಶಿಗಳಿಗೆ ತೊಂದರೆಯುಂಟಾಗಿದೆ. ಆದಕಾರಣ ರೈತರು ನೈಜಕೃಷಿ, ಔಷಧೀಯ ಗಿಡಗಳ ಕೃಷಿ, ಗೋವುಗಳ ರಕ್ಷಣೆಯನ್ನು ಕೈಗೊಳ್ಳಬೇಕೆಂದು ಅಭಿಪ್ರಾಯಪಟ್ಟರು.

ಶಿಕ್ಷಣ ಇಲಾಖೆಯ ಶ್ರೀ ದೊಡ್ಡೇಗೌಡರು ಮಾತನಾಡಿ ನಮ್ಮ ರಾಜ್ಯವು ಶೇ. 60 ರಿಂದ 65ರಷ್ಟು ಮಳೆಯಾಶ್ರಿತ ಪ್ರದೇಶವಾಗಿದ್ದು ಗಿಡಮರಗಳ ಹನನದಿಂದಾಗಿ ವಾರ್ಷಿಕ ವಾಡಿಕೆ ಮಳೆಯಲ್ಲಿ ಕುಂಠಿತವಾಗಿದೆ. ಉತ್ತಮ ಮಳೆಗಾಗಿ ಪ್ರತಿಯೊಬ್ಬರು ಒಂದು ಗಿಡವನ್ನು ನೆಟ್ಟು ಅದನ್ನು ಪೋಷಿಸುವುದರಿಂದ ಪರಿಸರ ಹಾನಿಯನ್ನು ಸ್ವಲ್ಪಮಟ್ಟಿಗೆ ತಗ್ಗಿಸಿ ಉತ್ತಮ ಮಳೆಯನ್ನು ನಿರೀಕ್ಷಿಸಬಹುದಾಗಿದೆ ಎಂದು ತಿಳಿಸಿದರು.

ಕೆವಿಕೆಯ ಬೀಜ ತಂತ್ರಜ್ಞಾನ ವಿಜ್ಞಾನಿಗಳಾದ ಶ್ರೀಮತಿ ದಿವ್ಯಾರವರು ಮಾತನಾಡಿ ಮನುಷ್ಯನಿಗೆ ಉತ್ತಮ ಆಮ್ಲಜನಕದ ಪ್ರಾಮುಖ್ಯತೆಯನ್ನು ತಿಳಿಸಿ ಎಲ್ಲರೂ ವರ್ಷಕ್ಕೆ 4 ಗಿಡವನ್ನು ನೆಟ್ಟು ಪೋಷಿಸುವಂತೆ ಕರೆ ನೀಡಿದರು.

ಆರೋಗ್ಯ ಇಲಾಖೆಯ ನಿವೃತ್ತ ಅಧಿಕಾರಿಗಳಾದ ಶ್ರೀಮತಿ ಪಾರ್ವತಮ್ಮನವರು ಯೋಗದ ಮಹತ್ವ ಮತ್ತು ಪ್ರಾಮುಖ್ಯತೆಯನ್ನು ವಿವರಿಸಿದರು.

ಹುಣಸೂರಿನ ಕೇಂದ್ರ ತಂಬಾಕು ಮಂಡಳಿಯ ವಿಜ್ಞಾನಿಗಳಾದ ಶ್ರೀ ಸಂದೀಪ್ ಮಂಜುನಾಥ್‌ರವರು ಮಾತನಾಡಿ ಇತ್ತೀಚಿನ ದಿನಗಳಲ್ಲಿ ಪ್ಲಾಸ್ಟಿಕ್ ಬಳಕೆಯು ಮಿತಿಮೀರುತ್ತಿದ್ದು ಇದನ್ನು ಕಡಿಮೆ ಮಾಡದಿದ್ದರೆ ಮುಂದಿನ ದಿನಗಳಲ್ಲಿ ನಮ್ಮ ಪರಿಸರಕ್ಕೆ ಅಪಾಯ ಕಟ್ಟಿಟ್ಟ ಬುತ್ತಿ, ಆದ ಕಾರಣ ಸಾಧ್ಯವಾದಷ್ಟು ಪ್ಲಾಸ್ಟಿಕನ್ನು ಕಡಿಮೆ ಬಳಕೆ ಮಾಡಲು ಸಲಹೆ ನೀಡಿದರು.

**ಬೆಂಗಳೂರಿನ ಜಯನಗರದಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** ದಿನಾಂಕ 6.6.2019 ರಂದು ವಿಶ್ವ ಪರಿಸರ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಶಾಲೆಯ ಜೀವ ವಿಜ್ಞಾನ ಶಿಕ್ಷಕಿಯರಾದ ಶ್ರೀಮತಿ ರೇವತಿಯವರು ಪರಿಸರ ದಿನಾಚರಣೆಯ ಪ್ರಾರಂಭ ಮತ್ತು ಮಹತ್ವದ ಬಗ್ಗೆ ತಿಳಿಸಿದರು. ಸಾರ್ವಜನಿಕರಲ್ಲಿ 'ಪರಿಸರ ಜಾಗೃತಿ'ಯನ್ನು ಮೂಡಿಸುವ ಸಲುವಾಗಿ ಶಾಲೆಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಂದ 'ಪರಿಸರ ಜಾಗೃತಿ ಜಾಥಾ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮಕ್ಕೆ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಡಿ.ಕೆ. ಕಲಿವೀರಪ್ಪ ನವರು ಹಾಗೂ ಸಹನಾ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಗಿರಿಜಾಶಾಸ್ತ್ರಿಯವರು ಚಾಲನೆ ನೀಡಿದರು. ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಗೆ ಸಂಬಂಧಪಟ್ಟ ಅನೇಕ ಘೋಷವಾಕ್ಯಗಳನ್ನು ಕೂಗುತ್ತಾ ಜಯನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಸಾರ್ವಜನಿಕರ ಗಮನ ಸೆಳೆದರು.

ಪರಿಸರ ಜಾಗೃತಿ ಜಾಥಾ ಕಾರ್ಯಕ್ರಮದ ನಂತರ ಶಾಲೆಯ ಆವರಣದಲ್ಲಿ ಮುಖ್ಯೋಪಾಧ್ಯಾಯರು

ವಿದ್ಯಾರ್ಥಿಗಳಿಗೆ ಪ್ರತಿಯೊಬ್ಬರೂ ಗಿಡಗಳನ್ನು ನೆಟ್ಟು ಪೋಷಿಸಬೇಕೆಂಬ ತಿಳಿವಳಿಕೆ ನೀಡಿದರು. ಜೊತೆಗೆ ವಿದ್ಯಾರ್ಥಿಗಳು ಹಲವು ಬಗೆಯ ಹೂವು, ಹಣ್ಣು ಹಾಗೂ ಔಷಧೀಯ ಗುಣಗಳುಳ್ಳ ಗಿಡಗಳನ್ನು ತಂದಿದ್ದರು. ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಸಹನಾ ವಿಭಾಗದ ಮುಖ್ಯಸ್ಥರು ಆ ಗಿಡಗಳನ್ನು ನೆಟ್ಟು ನೀರೆರೆದು ವಿದ್ಯಾರ್ಥಿಗಳ ಉತ್ಸಾಹವನ್ನು ಇಮ್ಮಡಿಗೊಳಿಸಿದರು.

ವಿದ್ಯಾರ್ಥಿಗಳಿಗೆ ವಿಶ್ವ ಪರಿಸರ ದಿನಾಚರಣೆಯ ಮಹತ್ವ ಮತ್ತು ಅರಿವನ್ನು ಮೂಡಿಸುವ ಉದ್ದೇಶದಿಂದ ದಿನಾಂಕ 3.6.2019ರಂದು ಶಾಲೆಯ ಆವರಣದಲ್ಲಿ ವಿಜ್ಞಾನ ಸಂಘ ಮತ್ತು ಕಲಾ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಪರಿಸರ ಮಾಲಿನ್ಯವನ್ನು ತಡೆಗಟ್ಟುವ ಕ್ರಮಗಳು ಎಂಬ ವಿಷಯವನ್ನು ಕುರಿತ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಇದೇ ಸಂದರ್ಭದಲ್ಲಿ ಬಹುಮಾನಗಳನ್ನು ವಿತರಿಸಲಾಯಿತು.

**ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ** ದಿನಾಂಕ 5.6.2019ರಂದು ವಿಶ್ವ ಪರಿಸರ ದಿನ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಮೈಸೂರು ನಗರದ ದೇವರಾಜ ಸಂಚಾರ ವಿಭಾಗದ ಎಸಿಪಿ ಶ್ರೀ ಜಿ.ಎನ್. ಮೋಹನ್ ರವರು ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಪರಿಸರ ಸಂರಕ್ಷಣೆಯ ಉದ್ದೇಶದಿಂದ ಸಾಕಷ್ಟು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾನೂನುಗಳನ್ನು ಜಾರಿಗೆ ತಂದಿದ್ದರು ಪರಿಸರ ಸಂರಕ್ಷಣೆಯು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿ ಯಾಗಿದೆ. ತಮ್ಮ ಮನೆ ಮತ್ತು ಜಮೀನುಗಳಲ್ಲಿ ಮಳೆನೀರು ಕೊಯ್ಲನ್ನು ಮಾಡಿ ನೀರನ್ನು ಸಂರಕ್ಷಿಸಿ ಅಂತರ್ಜಲ ಮಟ್ಟವನ್ನು ಹೆಚ್ಚಿಸಬೇಕು ಎಂದು ತಿಳಿಸಿದರು.

ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕರಾದ ಕರ್ನಲ್ ಡಾ. ಎಂ. ದಯಾನಂದ ರವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದ ಅಂಗವಾಗಿ ಆಸ್ಪತ್ರೆಯ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಚ್. ಬಸವನಗೌಡಪ್ಪರವರು, ವೈದ್ಯಕೀಯ ಅಧೀಕ್ಷಕರಾದ ಡಾ. ಎಂ. ಗುರುಸ್ವಾಮಿ, ಮುಖ್ಯ ಆಡಳಿತಾಧಿಕಾರಿಗಳಾದ ಶ್ರೀ ಬಸವರಾಜ್ ಕುಪ್ಪಸದ್, ಮುಖ್ಯ ಅಭಿಯಂತರರಾದ ಶ್ರೀ ವಿಜಯ್ ಬೆನ್ನೂರು, ಸ್ಥಾನೀಯ ವೈದ್ಯಾಧಿಕಾರಿ ಗಳಾದ ಡಾ. ಶಾಂತಮಲ್ಲಪ್ಪ ಹಾಗೂ ಆಸ್ಪತ್ರೆ ಸಿಬ್ಬಂದಿವರ್ಗ ದವರು ಹಾಜರಿದ್ದರು.

**ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** ದಿನಾಂಕ 8.6.2019 ರಂದು ನಡೆದ ವಿಶ್ವ ಪರಿಸರ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಡಾ. ಟಿ.ಎಚ್. ಉದಯ ಶಂಕರ್ ಮಾತನಾಡುತ್ತಾ ಪ್ರತಿಯೊಬ್ಬರು ಸಾಂಸ್ಕೃತಿಕ ಪರಿಸರ ಮತ್ತು ಭೌತಿಕ ಪರಿಸರವನ್ನು ಕಾಪಾಡಿಕೊಳ್ಳುವುದರ ಮೂಲಕ ಪ್ರಕೃತಿದತ್ತವಾದ ಪರಿಸರವನ್ನು ಸಂರಕ್ಷಿಸಿಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಸ್.ಸಿ. ಚನ್ನಬಸಪ್ಪ ನವರು ಮಾತನಾಡುತ್ತಾ ವಾಯುಮಾಲಿನ್ಯಕ್ಕೆ ಕಾರಣ ಮತ್ತು ಅದನ್ನು ತಡೆಗಟ್ಟುವ ವಿಧಾನಗಳ ಕುರಿತು ತಿಳಿಸಿದರು.

ಕು. ಐಶ್ವರ್ಯ ನಿರೂಪಿಸಿದರು. ಚಿ. ತೇಜಸ್ ಪ್ರಾರ್ಥಿಸಿದರು. ಕು. ಸುಜಾತ ಸ್ವಾಗತಿಸಿದರು. ವಿಶ್ವ ಪರಿಸರ ದಿನಾಚರಣೆಯನ್ನು ಕುರಿತು ಕು. ರಕ್ಷಿತ




ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಪರಿಸರ ದಿನಾಚರಣೆ

ಮಾತನಾಡಿದರು. ಕು. ಸಿಂಚನ ವಂದನಾರ್ಪಣೆ ಮಾಡಿದರು.

**ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ** ದಿನಾಂಕ 7.6.2019ರಂದು ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಸಕಲೇಶಪುರ ಅರಣ್ಯ ಇಲಾಖೆಯ ವಲಯ ಅರಣ್ಯ ಸಂರಕ್ಷಣಾಧಿಕಾರಿ ಗಳಾದ ಶ್ರೀ ಪಿ.ಸಿ. ರವೀಂದ್ರ ಸಸಿಯನ್ನು ನೆಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಪ್ರತಿಯೊಬ್ಬರೂ ಪ್ರತಿಮನೆಗಳಲ್ಲೂ ಸಸಿ ನೆಟ್ಟು ಪರಿಸರವನ್ನು ಇನ್ನೂ ಹಸಿರುಮಯ ಮಾಡೋಣ. ಭೂಮಿಯ ರಕ್ಷಣೆಗಾಗಿ ಗಿಡಗಳನ್ನು ಪೋಷಿಸಿ ಬೆಳೆಸಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯವೆಂದು ತಿಳಿಸಿದರು.

ಶಾಲೆಯ ಪ್ರಾಂಶುಪಾಲರಾದ ಶ್ರೀ ಬಿ. ಮಧುಕುಮಾರ್ ಅವರು ಮಾತನಾಡಿ ನಮ್ಮೆಲ್ಲರ ಭವಿಷ್ಯದ ಬದುಕಿಗಾಗಿ ನಾವೆಲ್ಲರೂ ಒಟ್ಟಾಗಿ ಗಾಳಿ, ನೀರು, ಪ್ರಕೃತಿಯನ್ನು ಸಂರಕ್ಷಿಸಬೇಕು. ಪ್ಲಾಸ್ಟಿಕ್ ವಸ್ತುಗಳ ಬಳಕೆಯನ್ನು ನಿಷೇಧ ಮಾಡಬೇಕು. 21ನೇ ಶತಮಾನದಲ್ಲಿರುವ ನಾವುಗಳು ತಾಂತ್ರಿಕತೆಯ ಜೀವನವನ್ನು ಅಳವಡಿಸಿಕೊಂಡಿರುವುದರಿಂದ ಕಾಡಿನ ನಾಶ ಮತ್ತು ಪ್ರಕೃತಿಯ ಮೇಲಾಗುವ ವಿನಾಶದ ಹಾದಿಯನ್ನು ತಡೆಯಲು ವಿದ್ಯಾರ್ಥಿಗಳು ಕಾರ್ಯಪ್ರವೃತ್ತರಾಗಬೇಕೆಂದು ತಿಳಿಸಿದರು.

ವಿದ್ಯಾರ್ಥಿ ವೃಂದದವರು ಪರಿಸರ ಕಾಳಜಿಯ ಬಗ್ಗೆ ನೃತ್ಯರೂಪಕವನ್ನು ನಡೆಸಿಕೊಟ್ಟರು. 10ನೇ ತರಗತಿ ವಿದ್ಯಾರ್ಥಿಗಳಾದ ಕು. ಜಿ.ಎಸ್. ಉಮಾ ಮತ್ತು ಶ್ರೀ ಆದ್ಯ ದರ್ಶನ್ ಪ್ರತಿಜ್ಞಾವಿಧಿ ಬೋಧಿಸಿದರು. ಶ್ರೀ ವಿಶಾಲ್ ಫೈಡ್ ಭಾಷಣ ಮಾಡಿದರು. ಕು. ಸಿರಿ ಮತ್ತು ವೃಂದದವರು ಪ್ರಾರ್ಥಿಸಿದರು. ಕು. ಶೀತಲ್ ಕಾರ್ಯಕ್ರಮ ನಿರೂಪಿಸಿದರು. ಕು. ಎಸ್.ಆರ್. ಶ್ರೇಯ ವಂದಿಸಿದರು.




ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಪರಿಸರ ದಿನಾಚರಣೆ

**ಮೈಸೂರಿನ ಶ್ರೀ ಶಿವರಾತ್ರೀಶ್ವರ ನಗರದ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** ದಿನಾಂಕ 8.6.2019 ರಂದು ವಿಶ್ವ ಪರಿಸರ ದಿನಾಚರಣೆ ಆಯೋಜಿಸಲಾಗಿತ್ತು. ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ಯಾರಮ್ಯೂಟಿಷಿ ಯಲ್ ಕೆಮಿಸ್ಟ್ರಿ ವಿಭಾಗದ ಮುಖ್ಯಸ್ಥರಾದ ಡಾ. ಪೂಜಾರ್‌ರವರು ಸಸಿಗಳನ್ನು ನೆಟ್ಟು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪರಿಸರ ಜಾಗೃತಿ ಜಾಥಾಕ್ಕೆ ಹಸಿರು ಉಳಿಸಿ, ಮನೆಗೊಂದು ಮರ ಊರಿಗೊಂದು ವನ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ, ಮುಂತಾದ ಘೋಷಣೆಗಳನ್ನು ಮೊಳಗಿಸಿದರು. ಶಾಲಾ ಬ್ಯಾಂಡ್‌ನೊಂದಿಗೆ ವಿದ್ಯಾರ್ಥಿಗಳು ಫಲಕಗಳನ್ನಿಡಿದು ಬನ್ನಿಮಂಟಪ, ಹುಡ್ಕೋ ಹಾಗೂ ಕಾವೇರಿ ನಗರ



ಮೈಸೂರಿನ ಶ್ರೀ ಶಿವರಾತ್ರೀಶ್ವರ ನಗರದ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಪರಿಸರ ದಿನಾಚರಣೆ

ನಿಶಾನೆ ತೋರುವುದರ ಮೂಲಕ ಚಾಲನೆ ನೀಡಿದರು. ಈ ಜಾಥಾದಲ್ಲಿ ವಿದ್ಯಾರ್ಥಿಗಳು ಸೈಕಲ್ ಬಳಸಿ ಇಂಧನ

ಬಡಾವಣೆಯಲ್ಲಿ ಸಂಚರಿಸಿ ಜನರಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕರಾದ ಶ್ರೀ ಎಸ್.ಪಿ. ಶಿವಶಂಕರ್‌ರವರು, ಉಪನ್ಯಾಸಕರು, ಶಿಕ್ಷಕರು ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

**ಚಾಮರಾಜನಗರದ ಮರಿಯಾಲದಲ್ಲಿರುವ ಜೆಎಸ್‌ಎಸ್ ರುಡ್‌ಸೆಟ್ ಸಂಸ್ಥೆಯಲ್ಲಿ** ದಿನಾಂಕ 7.6.2019ರಂದು ವಿಶ್ವ ಪರಿಸರ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು.

ಚಾಮರಾಜನಗರ ವಲಯ ಅರಣ್ಯಾಧಿಕಾರಿಗಳಾದ ಶ್ರೀ ಎಂ. ರವಿಯವರು ವಿಶ್ವಪರಿಸರ ದಿನದ ಬಗ್ಗೆ ಮಾತನಾಡಿ ಇತ್ತೀಚಿನ ದಿನಗಳಲ್ಲಿ ತಾಪಮಾನ ಏರು-ಪೇರಾಗಿರುವ ಬಗ್ಗೆ, ಅದರಿಂದಾಗುವ ದುಷ್ಪರಿಣಾಮಗಳ ಬಗ್ಗೆ ತಿಳಿಸಿದರು. ಕಾಡನ್ನು ಕತ್ತರಿಸಿ ಬೇರೆ ಬೇರೆ ಕಾರಣಗಳಿಗೆ ಆ ಸ್ಥಳವನ್ನು ಬಳಸುತ್ತಿರುವುದರಿಂದ ಕಾಡಿಗೆ ಬೆಂಕಿ ಬೀಳುವುದರಿಂದ, ಡ್ಯಾಂಗಳನ್ನು ಕಟ್ಟುವುದರಿಂದ, ಮನೆ ಕಟ್ಟಲು ಮರಗಳನ್ನು ಕಡಿದು ಹಾಕುತ್ತಿರುವುದರಿಂದ ಸದ್ಯ 21% ಜಾಗದಲ್ಲಿ ಮಾತ್ರ ಮರಗಿಡಗಳಿವೆ. ಇದು ಶೇ. 33%ಕ್ಕಿಂತಲೂ ಹೆಚ್ಚು ಇರಬೇಕು. ಹೀಗಾಗಿ ಬಿಸಿಲು ಹೆಚ್ಚಾಗಿ ಪ್ರಾಣ ಕಳೆದುಕೊಳ್ಳುವ ಪರಿಸ್ಥಿತಿಯು ಬಂದೊದಗಿದೆ. ವಿಶ್ವಮಟ್ಟದಲ್ಲೇ ಈ ಕಾರ್ಯಕ್ರಮವನ್ನು ಆಚರಿಸಿ ಜನರಿಗೆ ಮನವರಿಕೆ ಮಾಡಿಕೊಟ್ಟು ಗ್ರಾಮೀಣ ಮತ್ತು ನಗರಪ್ರದೇಶಗಳೆರಡರಲ್ಲೂ ಸ್ಥಳಾವಕಾಶ ವಿರುವೆಡೆ ರಸ್ತೆಗಳ ಬದಿಯಲ್ಲೂ ಗಿಡ ನೆಡಲು ಪ್ರೋತ್ಸಾಹಿಸಲಾಗುತ್ತಿದೆ ಎಂದರು.

ಅರಣ್ಯ ಇಲಾಖೆ ಹಾಗೂ ಸಾಮಾಜಿಕ ಅರಣ್ಯ ಇಲಾಖೆ ವಿಭಾಗದಿಂದಲೂ ಆಸಕ್ತರಿಗೆ ಸಸಿಗಳನ್ನು ಕೊಡಲಾಗುತ್ತಿದೆ ಎಂದು ಶಿಬಿರಾರ್ಥಿಗಳಿಗೆ ತಿಳಿಸಿದರು.

ರಾಜ್ಯ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ವಿನಯ ಕುಮಾರ್ ಮಾತನಾಡುತ್ತ ಭಾರತದಂತಹ ರಾಷ್ಟ್ರದಲ್ಲೂ ಕಳೆದ ವರ್ಷಗಳಲ್ಲಿ ಕಾಡು ಕಡಿಮೆಯಾಗಿ, ಮಾನವನ ಜೀವನದ ಮೇಲೆ ದುಷ್ಪರಿಣಾಮ ಬಿರುತ್ತದೆ. ಹೀಗಾಗಿ



ಜೆಎಸ್‌ಎಸ್ ರುಡ್‌ಸೆಟ್ ಸಂಸ್ಥೆಯಲ್ಲಿ ಪರಿಸರ ದಿನಾಚರಣೆ

ಮಾನವರಾದ ನಾವು ಎಚ್ಚೆತ್ತುಕೊಂಡು ಇರುವ ಗಿಡಗಳನ್ನು ಸಂರಕ್ಷಿಸಿ ಬೆಳೆಸಬೇಕು. ಹಬ್ಬಹರಿದಿನಗಳಲ್ಲಿ, ಹೊಸ ವರ್ಷ, ಹುಟ್ಟುಹಬ್ಬಗಳಲ್ಲಿ ಗಿಡಗಳನ್ನು ನೆಡುವ ಮೂಲಕ ಮಕ್ಕಳಿಗೂ ಇದರ ಅರಿವನ್ನು ಮೂಡಿಸಬೇಕು ಎಂದರು.

ಮತ್ತೋರ್ವ ಸಂಪನ್ಮೂಲ ವ್ಯಕ್ತಿಗಳಾದ ಡಾ. ಹರ್ಷರವರು ಮಾತನಾಡುತ್ತ ಶಾಲಾ-ಕಾಲೇಜುಗಳ ಅಧ್ಯಾಪಕರು ವಿದ್ಯಾರ್ಥಿಗಳು ಹಾಗೂ ಸ್ವ-ಸಹಾಯ ಸಂಘದ ಸದಸ್ಯರುಗಳು ವಿಶ್ವ ಪರಿಸರ ದಿನದ ಉದ್ದೇಶವನ್ನು ತಿಳಿದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕೆಂದರು.

ಸಂಸ್ಥೆಯ ಯೋಜನಾಧಿಕಾರಿಗಳಾದ ಶ್ರೀ ಬಿ.ಎಂ. ಚಂದ್ರಶೇಖರ್‌ರವರು ಈ ವರ್ಷದ ಬೇಸಿಗೆಯ ಅನಾಹುತಗಳನ್ನು ತಿಳಿಸುತ್ತಾ ಉತ್ತಮವಾದ ಗಾಳಿ, ನೀರು ಸಿಗುವುದು ಕಷ್ಟಕರವಾಗುತ್ತಿದೆ. ಹೀಗಾಗಿ ಗಿಡಗಳನ್ನು ಬೆಳೆಸಬೇಕು ಎಂದರು. ನಿರ್ದೇಶಕರಾದ ಶ್ರೀ ಕೆ. ಚಂದ್ರಶೇಖರ್‌ರವರು ವಿಶ್ವ ಪರಿಸರ ದಿನಾಚರಣೆಯು ಜನಾಂದೋಲನವಾಗಬೇಕು. ಪ್ರತಿಯೊಬ್ಬ ಮನುಷ್ಯನು ಇದರ ಮಹತ್ವವನ್ನು ಅರಿತು, ಕಾಡನ್ನು ಉಳಿಸಿ, ಹಸಿರಾಗಿಸಬೇಕು ಎಂದು ಕರೆಕೊಟ್ಟರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸಿದ್ಧರಾಮಯ್ಯ, ಸಂಸ್ಥೆಯ ಸಿಬ್ಬಂದಿವರ್ಗದವರು ಹಾಗೂ ಗ್ರಾಮೀಣ ಪ್ರದೇಶಗಳಿಂದ 5 ದಿನಗಳ ತರಬೇತಿಗಾಗಿ ಆಗಮಿಸಿದ್ದ 71 ಮಹಿಳೆಯರು ಭಾಗವಹಿಸಿದ್ದರು. ಕಾರ್ಯಕ್ರಮದ ಅಂಗವಾಗಿ ಪರಿಸರದ ಏಳ್ಗೆಗಾಗಿ ಪ್ರತಿಜ್ಞೆಯನ್ನು ಮಾಡಲಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ಸಂಯೋಜಕರಾದ ಶ್ರೀ ಬಿ. ಚಿನ್ನಸ್ವಾಮಿಯವರು ನಡೆಸಿಕೊಟ್ಟರು.

ಲೊಕ್ಕನಹಳ್ಳಿ ಶ್ರೀಮತಿ ಮಲ್ಲಿಗೆಯವರು ಪರಿಸರ ಗೀತೆಯನ್ನು ಹಾಡಿದರು. ಆವರಣದಲ್ಲಿ ಬೇವು ತೇಗ ಮುಂತಾದ ಗಿಡಗಳನ್ನು ಶಿಬಿರಾರ್ಥಿಗಳ ನೆರವಿನೊಂದಿಗೆ ನೆಡಲಾಯಿತು.

**ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** ದಿನಾಂಕ 13.6.2019 ರಂದು ವಿಶ್ವ ಪರಿಸರ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಅತಿಥಿಗಳಾಗಿ ಅರಣ್ಯ ಇಲಾಖೆಯ ಶ್ರೀ ಎಂ. ಪ್ರಕಾಶ್‌ರವರು ಭಾಗವಹಿಸಿದ್ದರು.

ಶಾಲೆಯ ಮುಖ್ಯೋಪಾಧ್ಯಾಯಿನಿಯರಾದ ಶ್ರೀಮತಿ ಎಚ್.ಎಂ. ಶೈಲಜರವರು ಅಧ್ಯಕ್ಷತೆ ವಹಿಸಿ ಪರಿಸರ ರಕ್ಷಣೆ ನಮ್ಮ ಹೊಣೆಗಾರಿಕೆ ಎಂದು ತಿಳಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಸಹಶಿಕ್ಷಕರಾದ ಶ್ರೀ ಮಲ್ಲಣ್ಣನವರು ವಿದ್ಯಾರ್ಥಿಗಳ ಜವಾಬ್ದಾರಿಗಳು ಮತ್ತು ಶಾಲಾ ವಾತಾವರಣವನ್ನು ಕುರಿತು ತಿಳಿಸಿದರು.

ಕಾರ್ಯಕ್ರಮವು ಗಿಡ ನೆಡುವುದರ ಮೂಲಕ ಉದ್ಘಾಟನೆಯಾಯಿತು.

***

ದಿನಾಂಕ 25.6.2019ರಂದು ವಿದ್ಯಾರ್ಥಿಸಂಘದ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸುತ್ತೂರು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು ಸ್ವಾಮೀಜಿಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತ ಜೆಎಸ್‌ಎಸ್ ಸಂಸ್ಥೆಯಲ್ಲಿ ಓದಿ ಸಾಧನೆ ಮಾಡಿದವರ ಬಗ್ಗೆ ವಿವರಿಸಿದರಲ್ಲದೆ ಶಾಲಾ ವಾತಾವರಣ ಕುರಿತು ಪ್ರಶಂಸೆ ವ್ಯಕ್ತಪಡಿಸಿದರು. ವಿದ್ಯಾರ್ಥಿ ಸಂಘದ ಕಾರ್ಯಚಟುವಟಿಕೆಗಳು ಚೆನ್ನಾಗಿ ಮೂಡಿಬರಲೆಂದು ಶುಭ ಹಾರೈಸಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಶಾಲೆಯ



ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಪರಿಸರ ದಿನಾಚರಣೆ

ಮುಖ್ಯೋಪಾಧ್ಯಾಯಿನಿಯವರಾದ ಶ್ರೀಮತಿ ಎಚ್.ಎಂ. ಶೈಲಜರವರು ವಿದ್ಯಾರ್ಥಿಗಳು ಪುಸ್ತಕಪ್ರೇಮಿಗಳಾಗ ಬೇಕೆಂದು ತಿಳಿಸಿ ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ಮುಖ್ಯ ಅತಿಥಿಗಳು ನವಕಂಕರಿ ಆಟ ಆಡುವುದರ ಮೂಲಕ ಕ್ರೀಡಾ ಸಂಘವನ್ನು ಉದ್ಘಾಟನೆ ಮಾಡಿದರು.

ಕಾರ್ಯಕ್ರಮದ ನಡುವೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

---



ನೊಯಿಡದಲ್ಲಿರುವ ಜೆಎಸ್‌ಎಸ್‌ಎಟಿಇಯಲ್ಲಿ ಪರಿಸರ ದಿನಾಚರಣೆ



ಕೋಲಾರ ಜಿಲ್ಲೆಯ ಮಾಲೂರಿನಲ್ಲಿರುವ ಜೆಎಸ್‌ಎಸ್ ಗಾಯತ್ರಿ ಪ್ರೌಢಶಾಲೆಯಲ್ಲಿ ಪರಿಸರ ದಿನಾಚರಣೆ

---



ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆಯಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆಯಲ್ಲಿ ಹಿರಿಯ ವಿಜ್ಞಾನಿ ಡಾ. ಅರುಣ್ ಬಳಮಟ್ಟಿಯವರು ಮಾತನಾಡಿದರು. ಚಿತ್ರದಲ್ಲಿ ಶ್ರೀ ಜಿ.ಎಂ. ಷಡಕ್ಷರಿ, ಶ್ರೀಮತಿ ಸಿ.ಪಿ. ನಿರ್ಮಲ, ಶ್ರೀ ಜಿ. ಶಿವಮಲ್ಲು ಶ್ರೀ ಬಿ.ಎಂ. ಸಿದ್ದಪ್ಪ ಇದ್ದಾರೆ

## ENGLISH SECTION

## JSS Institutions, Dubai

**1. JSS International School (JSSIS)** JSSIS now has a growing reputation for high academic achievement and individual excellence. It is breaking its own records and exceeding targets. This is a milestone year for the school as it has completed 10 years and continues to bring the best result so far.

### 12th Grade (ISE):

Sri Harsh Doddannavar, Science topper in ISC (4th All India Topper and UAE topper) has scored 99.25%, marks. Ms. Sandra Baiju Prasad (UAE Commerce Topper) has scored 99% marks.

### 10th Grade (ICSE):

Kum. Bhavik Kamlesh Goplani (Science Topper) scored 97.8% marks and wherear Kum. Aastha Chaurasia (Commerce Topper) has scored 96.4%. marks.

### Highlights of ISC Results

* School Average 86.3% with 10 centums
* 100% pass results

### Highlights of ICSE Results

* Highest batch average of 89.8% with 50 centums
* 100% pass results

## ISC TOPPERS

Science



Harsh Doddannavar -99.25%
Fourth All India Topper

Commerce



Ms. Sandra Baiju Prasad
99%

## ISCE TOPPERS

Science



Bhavik Kamlesh Goplani - 97.8%

Commerce



Aastha Chaurasia - 96.4%

## 2. JSS Private School (JSSPS)

Students of JSSPS, Dubai have once again shown consistency in their board results deving the year 2018-19 in the CBSE examination.

**12th Grade:**

Miss Shachi Intodia topped the Science stream with a score of 95.4%. In the Commerce stream Miss Preethika Ramesh who topped with 95.6%. Mr. Rijul Mohammad was a close second with 95.2% in Science. Two students, Mr. Vishal Padmakumar and Mr. Amatullah Batliwala achieved centum in Marketing and Physical Education respectively.

Grade average for Science stream is 82.2%, whereas for Commerce Stream it is 80%. Almost all the students secured first division with 83% achieving distinction.

In the 10th Grade examinations the following are the toppers:

| *Names* | *Subject* | *Marks* |
|---|---|---|
| Shereyansh Rai | English | 98 |
| Nidhi Manish Salvi | Maths | 100 |
| Shanya Mishra | Maths | 100 |
| | Hindi | 99 |
| MalvikaVittal Sawant | Maths | 100 |
| | SST | 100 |
| Madhumitha Balamurugan | Maths | 100 |
| | Science | 99 |
| Lakshmi Vijay | French | 91 |

## Overall Toppers

| *Names* | % |
|---|---|
| Madhumitha Balamurugan | 97.2 |
| Shanya Mishra | 96.0 |
| Abhishek Biju Das | 96.0 |
| Malvika Vitthal Sawant | 95.4 |
| Shreyas Chirasseril Sivan | 95.4 |

All the student have passed the examination with a Grade Average of 84.4%. All of them have secured first division with 81% and Distinction.

## GRADE 10 TOPPERS



B. Madhumitha - 97.2%



Shanya Mishra - 96%



Abhishek Biju Das - 96.6%

## GRADE 12 TOPPERS

Commerce



Preethika Ramesh - 95.6%

Science



Shachi Intodia - 95.4%

Science



Rijul Muhammed - 95.2%

---

## SSLC RESULTS

The SSLC Examination Board, Tamil Nadu, conducted SSLC examination in March 2019. A total of 45 students appeared for the examination **JSS Matriculation School, Talawadi** and all the 45 students have passed out with good marks and brought 100% results to the school.

Kum. N. Harshitha scored 465/500 marks (93%) stood first for the school.



The following students have scored more than 85%, in the examination.



G. Yashwanth
459/500 (91.8%)



D. Mahendra
438/500 (87.6%)



N. Iaman Kahan
435/500 (87.0%)



G. Mahadevaswamy
433/500 (86.6%)



R. Taslim
432/500 (86.4%)



S. Karthik Rao
427/500 (85.4%)



S. Jaderudraswamy
426/500 (85.2%)



M. Karthik
426/500 (85.2%)

---

## INVESTITURE CEREMONY

The Investiture Ceremony of JSS Public School, Siddharthanagar, Mysuru for the academic session 2019-20 was held on 14.6.2019. The event was presided over by the Chief Guest, Sri M. Mahadevaswamy, Police Inspector, Nazarbad, Mysore.

A spirit of unity and dynamism filled the air as the grand ceremony commenced with soulful rendition of the school prayer followed by welcome speech by Smt. B. Latha, Principal. The chief guest unfurled the school flag and lighted the auspicious lamp of knowledge. He also conferred on the newly elected Student Council with caps and flags and Smt. L.M. Geetha administered the oath. The students conducted the marchpast accompanied by the school band.

The guest congratulated the elected Student Council and gave an inspiring speech on the importance of Leadership Qualities. The programme was

anchored by Smt H. Latha, Co-ordinator, and, Sri Eshanya Madhu Gowda, class X A and school captain rendered vote of thanks.

The programme concluded with the National Anthem.

## World Environment Day

World Environment Day is a campaign celebrated every year by the people worldwide on 5th june. This year's celebrations, held under the theme "Beat Air Pollution" called upon people to explore renewable energy and green technologies, and improve air quality in cities and all places across the world. More than 6 billion people - 1/3 of them children - regularly breathe air that is so polluted it puts their health and well-being at risk.This campaign was established to raise the global awareness among people about the environmental issues as well as take positive environmental actions. **JSS Academy of Technical Education, Noida** celebrated the "World Environment Day" by planting saplings near the guest house lawn and the girls' hostel in the campus. Planting of saplings was done to encourage the youth and enhancing the quality of environment. The students took an oath that they will always put forth their efforts for preserving the protecting the environment. They also pledged to plant more trees and to maintain the quality of environment for the upcoming generation. As soon as rainy season approaches ther will make sure to find sufficient space in the campus and plant more and more trees for providing a healthy environment in the campus.

***

The World Environment Day was celebrated on 6.6.2019 with the theme "Beat Air Pollution" at **JSS Public School, HBR Layout, Bengaluru.** The students and teachers took a pledge to reduce air pollution by reducing use of fuels. Students of Std. IX spoke about the causes, effects and methods to reduce air pollution. Students of Std. X enacted a skit to create awareness about keeping the air clean. Mrs. Radha Murthy, Principal planted a sapling in the school premises and spoke about the importance of reducing pollution of environment. Students of Std. IX and X took out a procession through HBR layout to create awareness among the residents of the area. They also held placards and raised slogans on various methods to reduce pollution and segregate waste.

## Workshop held

JSS Centre for Management Studies (JSS CMS), Department of Management Studies, Sri Jayachamarajendra College of Engineering (SJCE), JSS Science and Technology University, Mysuru, organized a day-long workshop on "Human Resource Practices in Retail - Shift in the Role of HR Objectives" on 25.5.2019. The resource-person for the workshop was Sri Sunny Sodhi, HR Manager, Future Groups, Bangalore.

The workshop covered the HR aspects like steps in managing the employees (Recruitment and Selection, Training, Motivating and Controlling (Evaluation and Compensation), HR considerations faced by retailers, building employee commitment along with contemporary issues in retailing business. The students were very interactive, during the sessions in this workshop. Dr. P. Nagesh, Professor and HOD, convened the workshop and Dr. Swaroop Simha, Professor co-ordinated the event.

***

The Centre organized a special lecture on` Campus to Corporate'' on 3.5.2019. The resource-person for the workshop was Sri Naveen Chandra, Management Expert and Author of the book` "Campus to Corporate".

The lecture was organized for the MBA (Digital Marketing) MBA (Retail Management) and MBA (Corporate Finance) First Year and Final Year students.

The lecture was very motivational and focused on orienting students about the life outside the campus and how to climb the steps in the corporate world. The lecture gave many inputs to build a mindset to face challenges in life and to explore different opportunities to succeed in life.

It was also found to be greatly beneficial to the students to determine their career goals and work towards it and gain experience.

The students were very interactive and have rated the workshop very useful, and intreacted very enthusiatically during and after the lecture. The guest presented a copy of his book titled "Campus to Corporate" to a girl student from the audience, for her active interest in participating in the event.

Dr. P Nagesh, Professor and HOD, convened all the above lectures and Dr.

Swaroop Simha, Professor co-ordinated the events.

***

The Centre organized a special lecture on "Launching the Business" at the Centre on 9. 5.2019. The resource-person was Sri Sukumar Rangachari, Managing Director of ACE Components & Electronics Pvt. Ltd., Mysore.

The lecture was organized for the students of MBA (Digital Marketing) and MBA (Retail Management), who found the lecture very beneficial as it focused on orienting them about "Launching the Business". The lecture gave many inputs regarding entrepreneurship, starting from idea evaluation to preparing business plan, key marketing strategies involved in launching a business. Sri Sukumar gave many examples and personal instances to tell the students the dos and don'ts in launching a business.

***

Another lecture on "Impact Digital Marketing on Business in General" was oraganiaed at the Center on 9.5.2019. The resource-person was Sri K. Ramachandran, Head , Micro Initiatives and Strategy, M/s. Threesixtyone Degree Mind Consulting Pvt. Ltd., Chennai.

The lecture gave many inputs regarding invention, idea, innovation and integration, etc. to succeed in business. He covered the digital transformation and the tools leading to transformation of business processes and customers, response to it.

## SJCE Global Alumni Meet

It's a traditional respect to invite and greet the alumni in their alma mater by organizing Alumni Meet, which is always a special event. Sri Jayachamarajendra College of Engineering convened its 'Global Alumni Meet' on 1.6.2019, at San Jose, USA. The program was the first of its kind in the history of the Association. This platform will be acting as a mentor for the upcoming students of SJCE and JSS Science & Technology University.

Sri Mahesh Nagarajiah, President, SJCE Alumni Association welcomed the gathering and requested to introduce themselves. Around 110 proud alumni participated in the event. There were 45 entrepreneurs among the group, who ran big business at Bay Area of USA. The discussions were vey interactive.

Sri Mahesh Nagarajiah invited Prof. T.N. Nagabhushan, Principal, SJCE to speak a few words on SJCE and its growth. Prof. Nagabhushan appraised on the various activities like GIAN, NAIN, academic techniques and other effective teaching learning processes followed at the institution. Further, Prof. B.G. Sangameshwara, Vice-Chancellor, JSS STU delivered his presidential remarks where he elaborated the progress made by SJCE to achieve a university status. He invited all the alumni to do mentoring, to offer internships, share their experience with the new students, establish start-ups in India, particularly at SJCE campus. He called for their collaboration to engage in various academic and non-academic activities. Sri Aniruddh, Computer Science (2013 Batch) spoke about mentoring and how it can be done using open source platforms. Sri Kaushik recommended creating a portal like OSUM (Open Source University Meeting). Sri Krishnakanth assured to create a SJCE Alumni, San Jose Chapter and to have regular meetings in Bay Area. Dr. B.S. Harish, Co-ordinator, SJCE Alumni Association, proposed the vote of thanks.



## Appointment of Pro-Chancellor to JSSAHER

Dr. B. Suresh, Vice-Chancellor, JSS Academy of Higher Education & Research (JSS AHER), Mysuru, on completion of his term as the Vice-Chancellor, has been appointed as the Pro-Chancellor of the Academy and he took charge of the new office on 13.6.2019

---

If it's the Final Deluge
give up yourself
and become the Lord
Goheshwara

- Allama Prabhu

My words are full of
Your sweet name
My eyes are full of
Your image
My heart is full of
Memories of You

- Basavanna




ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯದಲ್ಲಿ ಏರ್ಪಡಿಸಿದ್ದ ಬಿ೯ ಬಯೋಟೆಕ್ನಾಲಜಿ ಎ ಟೆಕ್ನಿಕಲ್ ಕೆರಿಯಲ್ ಲಾಂಚ್ ಪ್ಯಾಡ್ ಚರ್ಚಾಕೂಟದಲ್ಲಿ ಡಾ. ಎಂ. ನಾಗೇಂದ್ರ ಪ್ರಸಾದ್ ಮಾತನಾಡಿದರು. ಚಿತ್ರದಲ್ಲಿ ಪ್ರೊ. ಕೆ.ಎಸ್. ಲೋಕೇಶ್, ಡಾ. ಪ್ರಭುಸ್ವಾಮಿ, ಡಾ. ಎಂ. ಧರ್ಮಪ್ರಸಾದ್, ಡಾ. ಭವಾನಿಶಂಕರ್ ಶೆವರಣ್, ಡಾ. ಬಾಲಾಜಿ ಪ್ರಕಾಶ್ ಇದ್ದಾರೆ



ಸುತ್ತೂರಿನ ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರವು ಹುಣಸೂರಿನ ಶಿವಯೋಗ ದೇಶಿ ಗೋಶಾಲೆಯ ಸಂಯುಕ್ತಾಶ್ರಯ ದಲ್ಲಿ ಹುಣಸೂರಿನ ಚೌಡಿಕಟ್ಟೆ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ವಿಶ್ವಪರಿಸರ ದಿನಾಚರಣೆಯನ್ನು ಡಾ. ಅರುಣ್ ಬಳಮಟ್ಟಿಯವರು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ದೊಡ್ಡೇಗೌಡರು, ಶ್ರೀಮತಿ ದಿವ್ಯಾ ಮೊದಲಾದವರಿದ್ದಾರೆ




ಬೆಂಗಳೂರಿನ ಎಚ್‌ಬಿಆರ್‌ನಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ನಡೆದ ಪರಿಸರ ದಿನಾಚರಣೆಯಲ್ಲಿ ವಿದ್ಯಾರ್ಥಿಗಳು ಘೋಷಣಾ ಫಲಕ ಗಳನ್ನು ಹಿಡಿದು ಜಾಥಾ ನಡೆಸಿ ಜಾಗೃತಿ ಮೂಡಿಸಿದರು

**Registered with the Registrar of Newspapers for India No. KARBIL/2014/66470**
**'JSS Varthapathra' Monthly, Vol. 4, Issue No. 19 July 2019**



ಮೈಸೂರಿನ ಶ್ರೀ ಸುತ್ತೂರು ಮಠಕ್ಕೆ ಭೇಟಿ ನೀಡಿದ ಈಶಾ ಫೌಂಡೇಷನ್ನಿನ ಸಂಸ್ಥಾಪಕರಾದ ಸದ್ಗುರು ಶ್ರೀ ಜಗ್ಗಿ ವಾಸುದೇವ್‌ರವರನ್ನು ಪರಮಪೂಜ್ಯ ಜಗದ್ಗುರುಗಳು ಗೌರವಿಸುತ್ತಿರುವುದು




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನಡೆದ ಪರಿಸರ ದಿನಾಚರಣೆಯಲ್ಲಿ ಎಸ್‌ಪಿ ಶ್ರೀ ಜಿ.ಎನ್. ಮೋಹನ್, ಡಾ. ಎಂ. ದಯಾನಂದ, ಡಾ. ಎಚ್. ಬಸವನ ಗೌಡಪ್ಪ, ಶ್ರೀ ಬಸವರಾಜ ಕುಪ್ಪಸದ್ ಮೊದಲಾದವರಿದ್ದಾರೆ



ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಜರುಗಿದ ಬೆಳದಿಂಗಳ ಸಂಗೀತ-213 ಕಾರ್ಯಕ್ರಮದಲ್ಲಿ ವಿದುಷಿ ಭಾರ್ಗವಿ ವೆಂಕಟರಾಮ್, ಮಾಸ್ಟರ್ ಸುಮಂತ್ ಮಂಜುನಾಥ್ (ವಯೊಲಿನ್) ಮಾಸ್ಟರ್ ಅಕ್ಷಯ್ ಆನಂದ್ (ಮೃದಂಗ)

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ಟವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821-2548212 Extn. 223 * e-mail: jssmasapatrike@gmail.com * website: www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು **ಬಿಡಿ ಪ್ರತಿ 10 ರೂ.**